

ಶೋಮ್ಯಾನ್ ಕ್ರಿಸ್ ಗೇಲ್



ಲಾರಾ ಅದೆಷ್ಟು ಸಲ ಎಚ್ಚರಿಕೆಯ ಘಂಟೆ ಬಾರಿಸಿದ್ದರೋ?

ಅವುಗಳೆಲ್ಲ ಸೇರಿ ವಿಂಡೀಸ್ ಗೆದ್ದಿರುವುದು ಕೇವಲ 42ರಲ್ಲಿ. 2006ರಿಂದ ಟ್ವೆಂಟಿ 20 ಪಂದ್ಯಗಳು ಶುರುವಾದ ಮೇಲೆ ಚಂದ್ರಪಾಲ್ ಅವರಿಂದ ಹಿಡಿದು ರೊವ್‌ಮನ್ ಪೊವೆಲ್‌ವರೆಗೆ 13 ನಾಯಕರು ವಿಂಡೀಸ್ ತಂಡವನ್ನು ರೂಪಿಸಿದ್ದಾರೆ. 179 ಅಂತರರಾಷ್ಟ್ರೀಯ ಟ್ವೆಂಟಿ 20 ಪಂದ್ಯಗಳಲ್ಲಿ 73 ವಿಜಯಗಳನ್ನು ತಂಡ ಇದುವರೆಗೆ ಕಂಡಿದೆ. 2000ದ ನಂತರ 346 ಏಕದಿನ ಪಂದ್ಯಗಳಲ್ಲಿ 120ರಲ್ಲಿ ಮಾತ್ರ ಗೆದ್ದಿದೆ. ಈ ಅಂಕಿಅಂಶವೇ ವಿಂಡೀಸ್ ಚುಟುಕು ಕ್ರಿಕೆಟ್‌ಗಷ್ಟೇ ಮುದ್ದು ಎನ್ನುವುದನ್ನು ಸಾಬೀತುಪಡಿಸುತ್ತದೆ.

ಕಳೆದ ಕೆಲವು ವರ್ಷಗಳಲ್ಲಿ ಕ್ರಿಸ್ ಗೇಲ್, ಕೀರನ್ ಪೊಲಾರ್ಡ್, ಡ್ವೇನ್ ಬ್ರಾವೊ, ಸ್ಯಾಮ್ಯುಯಲ್ ಬದ್ರಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದರು. ಸುನಿಲ್ ನಾರಾಯಣ್, ಆಂಡ್ರೆ ರಸೆಲ್, ಶಿಮ್ರನ್ ಹೆಟ್ಮೇಯರ್ ಗೈರುಹಾಜರಿಗೂ ಸ್ಥಳೀಯ ರಾಜಕಾರಣಕ್ಕೂ ಸಂಬಂಧವಿದೆ. ಕಿರಿದಾದ ಬೌಂಡರಿಗಳಿರುವ ಮೈದಾನದಲ್ಲಿ ಇವರೆಲ್ಲ ಶೂರರು. 2016ರ ಟ್ವೆಂಟಿ 20 ವಿಶ್ವಕಪ್ ಗೆದ್ದಿದ್ದು ಅದಕ್ಕೇ ಎಂದು ಟೀಕಿಸಿದವರೂ ಇದ್ದಾರೆ. ಅದಕ್ಕೆ ಇಂಬುಗೊಡುವಂತೆ ಆ ಕಪ್ ಗೆದ್ದ ಆರು ತಿಂಗಳ ನಂತರ ಪಾಕಿಸ್ತಾನದ ಎದುರು ಯುಎಇಯಲ್ಲಿ ನಡೆದ ಪಂದ್ಯಗಳಲ್ಲಿ ವಿಂಡೀಸ್ ತಡಬಡಾಯಿಸಿತ್ತು. 2021 ಹಾಗೂ 2022ರಲ್ಲಿ ಸ್ಪಿನ್ ಬೌಲಿಂಗ್ ಎದುರು ತಂಡದ ಪ್ರದರ್ಶನ ಅತಿ ನೀರಸ ಎನ್ನುವಂತೆ ಆಗಲು ಬೌಂಡರಿ ಗೆರೆಯ ದೂರವೂ ಕಾರಣ ಎಂದು ವಿಶ್ಲೇಷಿಸಲಾಗಿದೆ. ಫ್ರಂಟ್ ಫುಟ್ (ಮುಂದಡಿ ಇಟ್ಟು) ಶಾಟ್‌ಗಳಿಗೆ ವಿಂಡೀಸ್ ಬ್ಯಾಟ್ಸ್‌ಮನ್‌ಗಳು ಹೆಸರುವಾಸಿ. 2012ರಿಂದ 2016ರ ಅವಧಿಯಲ್ಲಿ ಕ್ರಿಕೆಟ್ ದತ್ತಾಂಶ ವಿಶ್ಲೇಷಣೆ ನೋಡಿ, ಆಟದ ಕಾರ್ಯತಂತ್ರ ಹೆಣೆಯುವುದನ್ನು ಇಂಗ್ಲೆಂಡ್ ತಂಡ ಹೇಳಿಕೊಟ್ಟಿತು. ಅದನ್ನೇ ಉಳಿದ ತಂಡಗಳೂ ಅನುಸರಿಸಿದವು. ಅದರ ಫಲವೇ ವಿಂಡೀಸ್‌ನ ಫ್ರಂಟ್ ಫುಟ್ ಆಟಕ್ಕೆ ಬ್ರೇಕ್.

ನರೇನ್, ಬದ್ರಿ, ಬ್ರಾವೊ, ಕ್ರಿಶ್‌ಮಾರ್ ಸ್ಯಾಂಟೊಕಿ, ರವಿ ರಾಂಪಾಲ್, ಅಲ್ಜಾರಿ ಜೋಸೆಫ್, ಜೇಸನ್ ಹೋಲ್ಡರ್, ಒಬೇಡ್ ಮೆಕಾಯ್, ಅಕೀಲ್ ಹೊಸೇನ್, ಒಡಿಯಾನ್ ಸ್ಮಿತ್ – ಈ ಎಲ್ಲರೂ ವಿಂಡೀಸ್‌ನ ಪ್ರತಿಭಾವಂತ ಬೌಲರ್‌ಗಳು. ಇವರಲ್ಲಿ ಯಾರೂ ವಾಲ್ಶ್, ಆಂಬ್ರೂಸ್, ಪ್ಯಾಟ್ರಿಕ್ ಪ್ಯಾಟರ್‌ಸನ್ ತರಹದ ರಹದಾರಿಯನ್ನು ಕ್ರಿಕೆಟ್‌ನಲ್ಲಿ ಮಾಡಿಕೊಳ್ಳಲು ಆಗಲಿಲ್ಲ. ಆಲ್‌ರೌಂಡರ್‌ಗಳ ನೆಚ್ಚು, ಬ್ಯಾಟಿಂಗ್ ಕ್ರಮಾಂಕವನ್ನೇ ಬಂಡವಾಳ ಮಾಡಿಕೊಂಡಿದ್ದು ಬೌಲರ್‌ಗಳ ಶಕ್ತಿವರ್ಧನೆಗೆ ಮುಳುವಾಯಿತು. 'ಕೆರೀಬಿಯನ್ ಪ್ರೀಮಿಯರ್ ಲೀಗ್' (ಸಿಪಿಎಲ್) ಕ್ರಿಕೆಟ್‌ಗೆ ಆಟಗಾರರನ್ನು ಒದಗಿಸಬಲ್ಲ ಬೇರೆ ಫೀಡರ್ ಲೀಗ್‌ಗಳು ವೆಸ್ಟ್‌ಇಂಡೀಸ್‌ನಲ್ಲಿ ಇಲ್ಲ. ದೇಸಿ ಕ್ರಿಕೆಟ್ ಎನ್ನುವುದಕ್ಕೆ ಇದುವೇ ಮುಳುವು. ಸಿಪಿಎಲ್‌ನಲ್ಲಿ ಆಡುವ ಆರು ತಂಡಗಳ ಆಟಗಾರರು ವಿಶ್ವದ ವಿವಿಧೆಡೆಯ ಪ್ರೀಮಿಯರ್ ಲೀಗ್ ಚುಟುಕು ಪಂದ್ಯಗಳಲ್ಲೂ ಆಡುತ್ತಾರೆ. ಆದರೆ, ಅಂತಹ ಪ್ರಮುಖ ಆಟಗಾರರು ಈ ಸಲ ಅರ್ಹತಾ ಪಂದ್ಯಗಳಿಗೆ ಅಲಭ್ಯರಾದರು. ಅದು ಅವರಿಗೆ ಆದ್ಯತೆಯೇ ಆಗಲಿಲ್ಲ. 'ಯುದ್ಧಕಾಲೇ ಶಸ್ತ್ರಾಭ್ಯಾಸ' ಎನ್ನುವಂತೆ ಶಾಯ್ ಹೋಪ್ ಅವರಿಗೆ ಕೆಲವೇ ತಿಂಗಳ ಹಿಂದೆ ನಾಯಕತ್ವ ವಹಿಸಿದರು. ಡರೆನ್ ಸ್ಯಾಮಿ ಅವರನ್ನು ಏಕದಿನ ಪಂದ್ಯಗಳ ಕೋಚ್ ಮಾಡಿದ್ದೂ ಇತ್ತೀಚೆಗೆ.

'ಕ್ರಿಕೆಟ್ ವೆಸ್ಟ್ ಇಂಡೀಸ್' (ಸಿಡಬ್ಲ್ಯುಐ) ಎನ್ನುವುದೀಗ 'ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿ' (ಡಬ್ಲ್ಯುಐಸಿಬಿ) ಆಗಿದೆ. ಗಾರ್ಡನ್ ಗ್ರೀನಿಜ್–ಡೆಸ್ಮಂಡ್ ಹೇಯ್ನ್ಸ್ ಆರಂಭಿಕ ಜೋಡಿ ಎದುರಾಳಿ ಕಂಗಾಲಾಗುವಂತೆ ರನ್ ಕಲೆಹಾಕುತ್ತಿದ್ದ ದಿನಗಳು, ಚ್ಯುಯಿಂಗ್‌ಗಮ್ ಅಗಿಯುತ್ತಾ ಬೌಲರ್‌ಗಳನ್ನು ಗುರಾಯಿಸಿ ಬೌಂಡರಿ ಕಡೆಗೆ ಇಶಾರೆ ಮಾಡುತ್ತಿದ್ದ ರಿಚರ್ಡ್ಸ್ ರಗಡ್ ಆಟ, ವಿಕೆಟ್ ಬುಡದ ಮೈಕ್ರೋಫೋನ್ ಮೂಲಕ ಪಾದಚಲನೆಯ ಸದ್ದು ಕೇಳಿದರೆ 'ಅಬ್ಬಾ' ಎನ್ನಬೇಕು ಹಾಗೆ ಆಡುತ್ತಿದ್ದ ಬ್ರಯಾನ್ ಲಾರಾ, ಲಂಗರು ಹಾಕಿ ನಿಲ್ಲುತ್ತಿದ್ದ ಗಸ್ ಲೋಗಿ, ಜೆಫ್ ಡೂಜಾನ್, ಆಲ್‌ರೌಂಡರ್ ಹೀಗಿರಬೇಕು ಎನ್ನುವಷ್ಟು ಸುಬಗನಂತೆ ಇದ್ದ ಹೂಪರ್, ಐಪಿಎಲ್‌ನಲ್ಲಿ ದಂಗುಬಡಿಸುವಂತೆ ಸಿಕ್ಸರ್‌ಗಳ ಹೊಡೆದೂ ಹೊಡೆದೂ ಅಭಿಮಾನಿಗಳ ಸಂಪಾದಿಸಿದ ಕ್ರಿಸ್ ಗೇಲ್, ನಿಕೊಲಸ್ ಪೂರನ್, ಹೆಟ್ಮೇಯರ್, ರಸೆಲ್, ದೈತ್ಯ ಪೊಲಾರ್ಡ್, ಮತ್ತೆ ಮತ್ತೆ ಕಾಡುವ ಅದೇ ಹೋಲ್ಡಿಂಗ್, ಮಾರ್ಷಲ್, ವಾಲ್ಶ್, ಆಂಬ್ರೂಸ್... ಹೇಗಿದ್ದ ವಿಂಡೀಸ್ ಹೇಗಾಗಿ ಹೋಯಿತೆನ್ನುವುದೇ ಸಂಕಟ.

ಪ್ರತಿಕ್ರಿಯಿಸಿ: feedback@sudha.co.in